**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ.ನಂಃ 503/2018**

ಸಿಡಬ್ಲ್ಯು -6
ಪಿಡಬ್ಲ್ಯು -5

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎಂ ಆರ್ ಸಲ್ಮಾನ್ |
| ತಂದೆಯ ಹೆಸರು | ಃ | ಎಂ ರಫೀಕ್ |
| ವಯಸ್ಸು | ಃ | 28 ವರ್ಷ |
| ವೃತ್ತಿ | ಃ | ವ್ಯಾಪಾರ |
| ವಾಸಸ್ಥಳ | ಃ | ವಿರಾಜಪೇಟೆ |

**ದಿನಾಂಕಃ 24-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಎಪಿಪಿಯವರಿಂದಃ-**

ನನಗೆ ಈಗ ತೋರಿಸಿದ ದಾಖಲಾತಿಗೆ ಸುಮಾರು 7 ವರ್ಷದ ಹಿಂದೆ ನಾನು ಪೋಲೀಸ್ ಠಾಣೆಗೆ ಹೋಗಿದ್ದಾಗ ಸಹಿ ಮಾಡಿರುತ್ತೇನೆ. ಸದರಿ ದಾಖಲಾತಿ ಅಮಾನತ್ತು ಮಹಜರು ಆಗಿದ್ದು ಅದನ್ನು ನಿಪಿ-8 ಎಂದೂ, ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ, ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ಘಟನಾ ಸಂಬಂಧ ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ, ಆರೋಪಿಯನ್ನು ನಾನು ನೋಡಿರುವುದಿಲ್ಲ, ಯಾವುದೇ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ದಿಃ15.11.2013 ರಂದು ತೆಗೆದ 2ಫೋಟೋವಿನಲ್ಲಿ ನಾನು ಇದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ದಿಃ 15.11.2013ರಂದು ರಾಃ8.45 ಗಂಟೆಗೆ ನಾನು ಚಾಸಾಃ7 ರವರೊಂದಿಗೆ ಇದ್ದ ಸಂದರ್ಭದಲ್ಲಿ ಆರೋಪಿಯಿಂದ ವಶಪಡಿಸಿಕೊಳ್ಳುವ ಸೊತ್ತುಗಳಿಗೆ ಪಂಚಾಯಿತಿದಾರರಾಗಿ ಕರೆದ ಸಂದರ್ಭದಲ್ಲಿ ನಾನು ಹಾಗೂ ಚಾಸಾಃ7 ರವರು ಅಲ್ಲಿಗೆ ಹೋಗಿರುತ್ತೇವೆ ಅಲ್ಲಿ ಚಾಸಾಃ14 ರವರು ಸಹಃ ಬಂದಿದ್ದು ಅಲ್ಲಿ ಪೊಲೀಸರು ನಮಗೆ ಒಬ್ಬ ವ್ಯಕ್ತಿಯನ್ನು ತೋರಿಸಿ ಆತನು ಕಳ್ಳತನ ಮಾಡಿರುವ ಬಗ್ಗೆ ಒಪ್ಪಿರುವುದಾಗಿ

ಆರೋಪಿ ಬಳಿ ಇದ್ದ ಸೊತ್ತುಗಳನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಮಹಜರ್‌ನ ಪಂಚಾಯಿತಿದಾರನಾಗಿ ಬರಲು ನೀಡಿದ ನೋಟಿಸ್‌ನ ಮೇರೆಗೆ ನಾನು ಒಪ್ಪಿದ್ದು ಆರೋಪಿಯು ತನ್ನ ವಶದಿಂದ ಒಂದು ಕಪ್ಪು ಮತ್ತು ಬಿಳಿ ಹರಳು ಇರುವ ಒಂದು ಜೊತೆ ಕಿವಿ ಓಲೆ ಮತ್ತು ಕಪ್ಪು ಮತ್ತು ಕೆಂಪು ಮಣಿ ಇರುವ ಚಿನ್ನದ ತಾಳಿ, ಒಂದು ಸೀಜರ್ ಲೈಟ್, ಮೆರೂನ್ ಕಲರ್‌ನ ಒಂದು ಟಾರ್ಚನ್ನು ಹಾಜರುಪಡಿಸಿರುತ್ತಾನೇ ಇದನ್ನು ಪೊಲೀಸರು ರಾ:9.30 ರಿಂದ 11.30 ರವರೆಗೆ ಮಹಜರನ್ನು ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ನಿಪಿ-10 ರಂತೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು**: ಇಲ್ಲ

**ಮರು ವಿಚಾರಣೆ: ಇಲ್ಲ.**

**ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ.ಹೇ.ಕೇ.ಸ.ಇದೆ.

ಸಿ.ಮಹಾಲಕ್ಷ್ಮಿ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ವಿರಾಜಪೇಟೆ